ತಿಳಿಸಿ. ಕೇಳದೆ ಇರಬಹುದು, ಏಕೆಂದರೆ ವ್ಯವಸ್ಥೆ ಸರಿಯಾಗಿಲ್ಲ. ಮುಂದೆ ನೋಡೋಣ.

Appointment of an I.A.S. Officer to Regional Transport Office for Speedy Disposal of applications.

Q.—299. Sri S. KARIAPPA (Virupakshipura).—

Will the Government be pleased to state :—

(*a*) whether the Regional Transport Office has been inspected recently ;

(*b*) if so, whether it has come to their notice that the copy applications, permit renewal applications and temporary permit applications have not been promptly disposed of ;

(*c*) whether it is under their contemplation to appoint an officer of the I.A.S. rank to this office ?

A.— Sri C. M. POONACHA (Minister for Home Affairs and Industries).—

(*a*) The question is not specific as to the office the member refers to.

(*b*) & (*c*) Do not arise.

ಶ್ರೀ ಎಸ್. ಕರಿಯಪ್ಪ.—ಈ ಟ್ರಾನ್ಸ್ ಪೋರ್ಟ್ ಆಫೀಸನ್ನು ಪರಿಶೀಲಿಸಲು ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಿರಲಿಲ್ಲವೇ ?

*ಶ್ರೀ ಸಿ. ಎಂ. ಪೂಣಚ್ಚ.—ಪ್ರಶ್ನೆ ಗೊತ್ತಾಗಲಿಲ್ಲ.

ಅಧ್ಯಕ್ಷರು.— ತಾವು ಪ್ರಶ್ನೆ ಕೇಳುವಾಗ ಒಂದು ನಿರ್ದಿಷ್ಟವಾದ ಆಫೀಸಿನ ವಿಷಯವಾಗಿ ಪ್ರಶ್ನೆ ಕೇಳಿದರೆ ಒಳ್ಳೆಯದು.

ಶ್ರೀ ಎಸ್. ಕರಿಯಪ್ಪ.—ಈಗ ನೇಮಿಸಿರುವ ರೀಜನಲ್ ಟ್ರಾನ್ಸ್ ಪೋರ್ಟ್ ಆಫೀಸರು ಸರಿಯಾದ ಅರ್ಹತೆಗಳನ್ನು ಹೊಂದಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಈ ರೀಜನಲ್ ಟ್ರಾನ್ಸ್ ಪೋರ್ಟ್ ಆಫೀಸಿಗೆ ಸರಿಯಾದ ಮಾಹಿತಿ ಇರುವ ಆಫೀಸರುಗಳನ್ನೇ ನೇಮಕ ಮಾಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಇವರ ರ್ಯಾಂಕು ಏನು ?

ಶ್ರೀ ಸಿ. ಎಂ. ಪೂಣಚ್ಚ.—ಅವರು ಬೇರೆ ಒಂದು ಇಲಾಖೆಯಲ್ಲಿರುವ ಅಸಿಸ್ಟೆಂಟು ಕಮಿಷನರ್ ರ್ಯಾಂಕಿಗೆ ಸೇರಿದ ಆಫೀಸರು.

ಶ್ರೀ ಎಸ್. ಕರಿಯಪ್ಪ.—ಮೊದಲು ಐ. ಎ. ಎಸ್. ರ್ಯಾಂಕಿಗೆ ಸೇರಿದ ಆಫೀಸರಿರಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ನನಗೆ ಆ ವಿಷಯ ತಿಳಿಯದು.

Exempting Local Bodies from Audit Charges

Q.—372 Sri B. S. SHANKARAPPA (Hosadurga).—

Will the Government be pleased to state :—

(*a*) whether they propose to exempt Local Bodies from the payment of audit charges as they do not make any profits ;

(*b*) whether this system obtained in the integrated areas of the new Mysore State ;

(*c*) whether they propose to take appropriate action in regard to application of this system throughout the State ?

A.—Sri T. MARIAPPA (Minister for Finance and Legal Affairs).

(*a*) This is a matter of opinion.

(*b*) The system is different.

(*c*) The question of levy of audit fees throughout the State will be considered.

ಶ್ರೀ ಬಿ. ಎಸ್. ಶಂಕರಪ್ಪ.—ಹಳೆಯ ಮೈಸೂರು ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಆಡಿಟ್ ಚಾರ್ಜುಗಳನ್ನು ವಸೂಲು ಮಾಡುತ್ತಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಶ್ರೀ ಟಿ. ಮರಿಯಪ್ಪ.—ತಿಳಿದಿದೆ.

Relief to Local Bodies for Payment of Enhanced Salary to their Employees.

Q.—373. Sri B. S. SHANKARAPPA (Hosadurga).—

Will the Government be pleased to state :—

whether they propose to grant some amount by way of relief to local bodies towards enhanced pay and dearness allowance of their employees ?

A.—Sri T. MARIAPPA (Minister for Finance and Legal Affairs).—

This depends on the resources of the State.

ಶ್ರೀ ಬಿ. ಎಸ್. ಶಂಕರಪ್ಪ.—ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ನೌಕರಮಾನೆಯರು ಸರ್ಕಾರದ ನೌಕರರಲ್ಲವೇ ?

ಶ್ರೀ ಟಿ. ಮರಿಯಪ್ಪ.—ಕೆಲವು ಸರ್ಕಾರದ ನೌಕರರನ್ನೂ ನಾವು lend ಮಾಡಿದ್ದೇವೆ; ಅವರೂ ಕೆಲವರನ್ನು ನೇಮಿಸಿಕೊಂಡಿದ್ದಾರೆ.